**PW-1:** ಕಮಲಮ್ಮ

ದಿನಾಂಕಃ **02.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಪ್ರತಿವಾದಿ ಪರವಾಗಿ ಶ್ರೀ ಪಿ.ವಿ.ವೈ. ವಕೀಲರಿಂದಃ**

ನಾನು ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನನ್ನ ಪರವಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಿರುವ ದಾಖಲಾತಿಗಳನ್ನು ನಿಶಾನೆಗೊಳಿಸಬೇಕಾಗಿ ವಿನಂತಿ.

ಸಾಕ್ಷಿಯು ದಿನಾಂಕಃ 23.04.1962 ರ ನೋಂದಾಯಿತ ಕ್ರಯಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 1 ಎಂದು, ಸದರಿ ಕ್ರಯಪತ್ರದ ದೃಢೀಕೃತ ನಕಲನ್ನು ನಿಪಿ.1(ಎ) ಎಂದು, ಪ್ರನೋಟ್ ಅನ್ನು ನಿಪಿ.2 ಎಂದು, ದಿನಾಂಕಃ 14.03.1989 ರ ನೋಂದಾಯಿತ ಊಯಿಲನ್ನು ನಿಪಿ.3 ಎಂದು, ಹಕ್ಕು ಬದಲಾವಣೆ ವಹಿಗಳನ್ನು ನಿಪಿ.4 ಮತ್ತು 5 ಎಂದು, ಆರ್.ಆರ್. ಮತ್ತು ಇಂಡೆಕ್ಸ್ ಆಫ್ ಲ್ಯಾಂಡ್ ಅನ್ನು ನಿಪಿ.6 ಮತ್ತು 7 ಎಂದು, ಮರಣಪ್ರಮಾಣಪತ್ರಗಳನ್ನು ನಿಪಿ.8 ಮತ್ತು 9 ಎಂದು, ದಿನಾಂಕಃ 11.08.2016 ರ ನೋಂದಾಯಿತ ದಾನಪತ್ರವನ್ನು ನಿಪಿ.10 ಎಂದು, ಎ.ಸಿ. ನ್ಯಾಯಾಲಯದ ಆರ್.ಆರ್.ಟಿ. (ಅಪೀಲು) 66/1995-96 ಆದೇಶದ ದೃಢೀಕೃತ ನಕಲನ್ನು ನಿಪಿ.11 ಎಂದು, ಪಹಣಿ ಪತ್ರಿಕೆಗಳನ್ನು ನಿಪಿ.12 ರಿಂದ 15 ಎಂದು ಗುರುತಿಸಲಾಯಿತು.

(ಪ್ರತಿವಾದಿ ಪರ ವಕೀಲರು ಮುಂದುವರಿದ ಮುಖ್ಯವಿಚಾರಣೆಗೆ ಕಾಲವಕಾಶ ಕೋರಿದ್ದು ಅನುಮತಿ ನೀಡಿ ಮುಂದುವರಿದ ಮುಖ್ಯವಿಚಾರಣೆಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.